**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.**

**Spl.C.NDPS.08/2022**

| | | |
|---|---|---|
| ಸಾಕ್ಷಿದಾರರ ಹೆಸರು | : | ಮುರುಡೇಶ ಎಸ್. |
| ತಂದೆಯ ಹೆಸರು | : | ಸಣ್ಣ ರಂಗಪ್ಪ |
| ವಯಸ್ಸು | : | 52 ವರ್ಷ |
| ಉದ್ಯೋಗ | : | ಅಬಕಾರಿ ಉಪಾಧೀಕ್ಷಕರು, ಹಾಸನ |
| ವಾಸ ಸ್ಥಳ | : | ಹಾಸನ |

ಪಿ.ಡಬ್ಲ್ಯೂ 5

ಸಿ.ಡಬ್ಲ್ಯೂ 4

ದಿ:28-04-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ**

1. ನಾನು ದಿಃ 10-02-2022 ರಿಂದ ದಿಃ 03-11-2025 ರವರೆಗೆ ಅಬಕಾರಿ ಉಪಾಧೀಕ್ಷಕರಾಗಿ ಹೊನ್ನಾಳಿ ವಿಭಾಗದಲ್ಲಿ ಕೆಲಸ ಮಾಡಿದ್ದೇನೆ. ದಿಃ 30-03-2022 ರಂದು ಹೊನ್ನಾಳಿ ವಲಯ ನಿರೀಕ್ಷಕರು ಮತ್ತು ಸಿಬ್ಬಂದಿಯೊಂದಿಗೆ ನ್ಯಾಮತಿ ತಾಲ್ಲೂಕಿನ ಕುದುರುಕೊಂಡ ಗ್ರಾಮದಲ್ಲಿ ದಾಳಿಯಲ್ಲಿದ್ದಾಗ ಚಾಸಾ-1 ರವರು ದೂರವಾಣಿ ಕರೆ ಮಾಡಿ ನ್ಯಾಮತಿ ತಾಲ್ಲೂಕು ಕುದುರೆಕೊಂಡ ಗ್ರಾಮದ ಸರ್ವೆ ನಂಬರ 12/11 ರಲ್ಲಿ ಅಕ್ರಮವಾಗಿ ಗಾಂಜಾ ಗಿಡಗಳನ್ನು ಬೆಳೆದಿರುವ ಬಗ್ಗೆ ಮಾಹಿತಿ ಬಂದಿರುವುದಾಗಿ ತಿಳಿಸಿದರು ಮತ್ತು ಪತ್ರಾಂಕಿತ ಅಧಿಕಾರಿಗಳಾಗಿ ಭಾಗವಹಿಸಲು ಮನವಿ ಪತ್ರ ನೀಡಿರುತ್ತಾರೆ. ಅದರಂತೆ ನಾನು ಮನವಿ ಪತ್ರ ಸ್ವೀಕರಿಸಿ ಅನುಮತಿ ಪತ್ರವನ್ನು ನೀಡಿರುತ್ತೇನೆ. ಮನವಿ ಪತ್ರವನ್ನು ಈಗಾಗಲೇ ನಿಪಿ-2 ಅಂತ ಗುರುತಿಸಲಾಗಿದೆ. ನಾನು ನೀಡಿದ ಅನುಮತಿ ಪತ್ರವನ್ನು ಈಗ

ನೋಡಿ ಅದರಲ್ಲಿರುವ ನನ್ನ ಸಹಿ ಗುರುತಿಸುತ್ತೇನೆ. ಅನುಮತಿ ಪತ್ರವನ್ನು ಈಗಾಗಲೇ ನಿಪಿ-3 ಅಂತ ಗುರುತಿಸಲಾಗಿದೆ. ದಾಳಿ ಸ್ಥಳಕ್ಕೆ ತಲುಪಿದಾಗ ಚಾಸಾ-2 ಹಾಗೂ 3 ರವರು ಮತ್ತು ಸಾಕ್ಷಿ ರಂಗಪ್ಪರವರನ್ನು ಬರಮಾಡಿಕೊಂಡು ಸರ್ವೇ ನಂಬರ 12/11 ರಲ್ಲಿ ಶೋಧನೆ ಮಾಡಲಾಯಿತು. ಪೂರ್ಣ ಅಂಚಿನಲ್ಲಿ ಎರಡು ಗಾಂಜಾ ಗಿಡಗಳು ಬೆಳೆದಿರುವುದು ಕಂಡು ಬಂದಿರುತ್ತದೆ. ಅದನ್ನು ಚಾಸಾ-1 ರವರು ಗುರುತಿಸಿರುತ್ತಾರೆ. ನಂತರ ನಮ್ಮನ್ನು ಅಲ್ಲಿಗೆ ಬರಮಾಡಿಕೊಂಡರು. ಆ ಎರಡು ಗಿಡಗಳನ್ನು ನೋಡಿ ಗುರುತಿಸುತ್ತೇನೆ. ಅವು ಗಾಂಜಾ ಗಿಡಗಳು ಅಂತ ತಿಳಿದು ಬಂತು. ಆ ಎರಡು ಗಾಂಜಾ ಗಿಡಗಳನ್ನು ಸಿಬ್ಬಂದಿಯೊಂದಿಗೆ ಕಿತ್ತು, ಅಳತೆ ಮಾಡಿ ನೋಡಲಾಗಿ ಅದು ಸುಮಾರು 03 ಅಡಿ ಇದ್ದು, ಅದರ ತೂಕ 134 ಗ್ರಾಂ. ಇತ್ತು. ನಂತರ ಚಾಸಾ-1 ರವರು ಬಿಳಿ ಬಟ್ಟೆಯಲ್ಲಿ ಗಾಂಜಾ ಗಿಡಗಳನ್ನು ಇಟ್ಟು, ದಾರದಿಂದ ಸುತ್ತಿ, ಮಾದರಿ ಮೊಹರಿನ ಚೀಟಿಯನ್ನು ತಯಾರಿಸಿ ಅಂಟಿಸಿಸಿದರು. ನಂತರ ಮುಂದಿನ ಕ್ರಮ ಜರುಗಿಸಲು ಸೂಕ್ತ ನಿರ್ದೇಶನವನ್ನು ನೀಡಲಾಯಿತು.

2. ಚಾಸಾ-2 ರವರು ಸದರಿ ಜಮೀನು ಲಕ್ಷ್ಮಪ್ಪ ಬಿನ್ ಗಿರಿಯಪ್ಪರವರಿಗೆ ಸಂಬಂಧಪಟ್ಟಿದ್ದು ಇರುತ್ತದೆ ಅಂತ ಮಾಹಿತಿ ಕೊಟ್ಟರು. ಆ ಸ್ಥಳದಲ್ಲಿ ಮಾಡಿದ ಪಂಚನಾಮೆಯನ್ನು ಈಗ ನೋಡುತ್ತಿದ್ದು, ಅದನ್ನು ಈಗಾಗಲೇ ನಿಪಿ-8 ಅಂತ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-8(ಇ) ಅಂತ ಗುರುತಿಸಲಾಯಿತು. ಆ ಸಮಯದಲ್ಲಿ ತೆಗೆದ ಪೋಟೋಗಳನ್ನು ನೋಡಿ ಗುರುತಿಸುತ್ತೇನೆ. ಅವುಗಳನ್ನು ಈಗಾಗಲೇ ನಿಪಿ-9 ರಿಂದ 12 ಅಂತ ಗುರುತಿಸಲಾಗಿದೆ. ಸಾಕ್ಷಿದಾರರು ನ್ಯಾಯಾಲಯದ ಮುಂದೆ ಇರುವ ಮು.ಮಾ.1 ನ್ನು ನೋಡಿ ಗುರುತಿಸುತ್ತಾರೆ.

**<u>ಪಾಟೀ ಸವಾಲುಃ ಶ್ರೀ , ವಕೀಲರಿಂದ ಆರೋಪಿತರ ಪರವಾಗಿ</u>**:

3. ನಮ್ಮ ಠಾಣೆಯು ಹೊನ್ನಾಳಿಯ KSRTC ಬಸ್ ನಿಲ್ದಾಣದ ಎದುರುಗಡೆ ಇರುತ್ತದೆ. ಅಲ್ಲಿಂದ 01 ಕಿ.ಮೀ. ಅಂತರದಲ್ಲಿ ಹೊನ್ನಾಳಿ ಜೆ.ಎಂ.ಎಫ್.ಸಿ. ನ್ಯಾಯಾಲಯ ಇರುತ್ತದೆ. ಹೊನ್ನಾಳಿ

ಕಛೇರಿಗೆ ನಾನು ಆ ದಿನ ಮಧ್ಯಾಹ್ನ 4.00 ಗಂಟೆಗೆ ಬಂದೆ. ನ್ಯಾಮತಿ ತಾಲ್ಲೂಕಿನ ಕುದುರೆಕೊಂಡ ಗ್ರಾಮದಲ್ಲಿ ಇದ್ದೆವು. ಆ ದಿನ ಬೆಳಿಗ್ಗೆ 7.00 ಗಂಟೆಗೆ ನಾವು ದಸ್ತುಸಂಚರಿಸುತ್ತಿದ್ದೆವು. ಬೆಳಿಗ್ಗೆ 10.30 ಗಂಟೆಗೆ ನಮಗೆ ಚಾಸಾ-1 ರವರಿಂದ ಅಕ್ರಮವಾಗಿ ಗಾಂಜಾ ಬೆಳೆದಿರುವ ಬಗ್ಗೆ ಮಾಹಿತಿ ಬಂದಿತು. ನಿಪಿ-2 ಕಛೇರಿಯ ಪತ್ರ ಇರುವುದಿಲ್ಲ ಅಂದರೆ ಸರಿಯಲ್ಲ. ಅದರಲ್ಲಿ ಸಮಯವನ್ನು ನಮೂದು ಮಾಡಿಲ್ಲ ಅಂದರೆ ನಿಜ. ಪತ್ರ ವ್ಯವಹಾರದ ಸಂಖ್ಯೆ ಅದರಲ್ಲಿ ನಮುಾದು ಮಾಡಿಲ್ಲ ಅಂದರೆ ಸರಿ. ಕೇವಲ ಬಿಳಿ ಹಾಳೆಯ ಮೇಲೆ ವಿಷಯವನ್ನು ಬೆರಳಚ್ಚು ಮಾಡಲಾಗಿದೆ ಅಂದರೆ ಸರಿಯಲ್ಲ. ನಿಪಿ-2 ನ್ನು ಮಧ್ಯಾಹ್ನ 12.00 ಗಂಟೆ ಸಮಯದಲ್ಲಿ ಕುದುರೆಕೊಂಡ ಗ್ರಾಮದ ಹಳ್ಳದ ಹತ್ತಿರ ಪಡೆದುಕೊಂಡಿರುತ್ತೇನೆ. ಆ ಪತ್ರದಲ್ಲಿ ನಾನು ಸಹ ಸಹಕರಿಸಬೇಕು ಅಂತ ಬರೆದಿದ್ದಾರೆ ಅಂದರೆ ನಿಜ. ಈಗ ತೋರಿಸಿದ ನಿಪಿ-3 ನಮ್ಮ ಕಛೇರಿಯ ಪತ್ರ ಇರುತ್ತದೆ. ನಿಪಿ-3 ನ್ನು ಮಾಹಿತಿ ಬಂದ ನಂತರ ಕಛೇರಿಯಲ್ಲಿ ನಮ್ಮ ಸಿಬ್ಬಂದಿಯ ಮೂಲಕ ತಯಾರಿಸಲಾಯಿತು. ಸಹಿಯನ್ನು ನಾನು ಮಧ್ಯಾಹ್ನ 12.00 ಗಂಟೆಗೆ ಮಾಡಿದ್ದೇನೆ. ಅನುಮತಿಯನ್ನು ಮಧ್ಯಾಹ್ನ 12.00 ಗಂಟೆಗೆ ಕೊಟ್ಟಿದ್ದೀರಾ ಅಂದರೆ ದೂರವಾಣಿ ಮುಖಾಂತರ ನಾನು ಅನುಮತಿ ನೀಡಿದ್ದೇನೆ. ಈ ವಿಷಯವನ್ನು ಇದೇ ಮೊದಲ ಬಾರಿ ನುಡಿಯುತ್ತಿದ್ದೇನೆ ಮತ್ತು ಮಹಜರನಲ್ಲಿ ನಮೂದು ಮಾಡಿಲ್ಲ ಅಂದರೆ ನಿಜ.

4. ನಿಪಿ-8 ರಲ್ಲಿ ಕೊನೆಯ ಪುಟದಲ್ಲಿ ಮಾತ್ರ ನನ್ನ ಸಹಿ ಇದ್ದು, ಇತರೆ ಪುಟಗಳಲ್ಲಿ ನನ್ನ ಸಹಿ ಇಲ್ಲ ಅಂದರೆ ಸರಿ. ಆ ದಿನ ಬೆಳಿಗ್ಗೆ 10.30 ಗಂಟೆಗೆ ನಾವು ಸರ್ಕಾರಿ ಪ್ರಾಥಮಿಕ ಶಾಲೆಯ ಬಳಿ ಇದ್ದೇವು. ಈಗ ತೋರಿಸಿದ ನಿಡಿ-1 ರಲ್ಲಿ ನನ್ನ ಸಹಿ ಇರುತ್ತದೆ. ನಿಡಿ-1 ಮಹಜರನ್ನು ಅದೇ ದಿನ ಮತ್ತೊಂದು ಪ್ರಕರಣದಲ್ಲಿ ತಯಾರಿಸಿದ್ದು ಇರುತ್ತದೆ ಅಂದರೆ ನಿಜ. ಆ ಮಹಜರ ಪ್ರಕಾರ ನಾನು ಬೆಳಿಗ್ಗೆ 10.30 ಗಂಟೆಗೆ ನಾನು ಸರ್ಕಾರಿ ಪ್ರಾಥಮಿಕ ಶಾಲೆಯ ಬಳಿ ಇರಲಿಲ್ಲ ಅಂದರೆ ಸರಿಯಲ್ಲ. ಮಧ್ಯಾಹ್ನ 12.00 ಗಂಟೆಗೆ ನಾನು ಆ ದಿನ ಚಾಸಾ-01 ರವರಿಗೆ ಕುದುರೆಕೊಂಡ ಗ್ರಾಮದ ಎರಗನಾಳ ರಸ್ತೆಯಲ್ಲಿರುವ ಹಳ್ಳದ ಹತ್ತಿರ

ಭೇಟಿಯಾದೆವು. ಕೊರ್ಟನಿಂದ ನಾವು ಶೋಧನೆ ವಾರೆಂಟ್ ನ್ನು ದಾಳಿ ಸಮಯದಲ್ಲಿ ಪಡೆದುಕೊಂಡಿಲ್ಲ. ತನಿಖೆ/ದಾಳಿ 12.00 ಗಂಟೆ ನಂತರವೇ ಮಾಡಿದ್ದಾರೆ ಅಂದರೆ ನಿಜ. ಕುದುರೆಕೊಂಡ ಗ್ರಾಮದಿಂದ ಉತ್ತರ ದಿಕ್ಕಿನಲ್ಲಿ ಆ ಜಮೀನು ಇರುತ್ತದೆ. ಸ್ಥಳದಲ್ಲಿ ವಿಸ್ತೀರ್ಣ ಬಗ್ಗೆ ವಿಚಾರಿಸಿದಾಗ ಅದು 1 ಎಕರೆ ಇದೆ ಅಂತ ಮಾಹಿತಿ ಬಂತು. ಆ ಜಮೀನಿನ ಪೂರ್ವಕ್ಕೆ ಗದುಗೆಪ್ಪರವರ ಜಮೀನು, ಪಶ್ಚಿಮಕ್ಕೆ ಚಂದ್ರಪ್ಪರವರ ಜಮೀನು, ಉತ್ತರಕ್ಕೆ ಮರಿಯಪ್ಪರವರ ಜಮೀನು ಮತ್ತು ದಕ್ಷಿಣಕ್ಕೆ ಹಳ್ಳ ಇರುತ್ತದೆ. ನಾವು ದಾಳಿಯನ್ನು ದಕ್ಷಿಣ ದಿಕ್ಕಿನಿಂದ ಪ್ರಾರಂಭಿಸಿದೆವು.

5. ಚಾಸಾ-1 ರವರು ಅಬಕಾರಿ ನಿರೀಕ್ಷಕರು. ಅವರು 20 ಅಡಿ ದೂರದಿಂದ ಆ ಜಮೀನಿನಲ್ಲಿ ಗಿಡ ಬೆಳೆದಿದ್ದನ್ನು ನೋಡಿದ್ದಾರೆ ಅಂತ ಹೇಳಿದರು. ಆ ಎರಡು ಗಿಡಗಳು ಸುಮಾರು 20-25 ಎತ್ತರ ಇತ್ತು. ಸಿಬ್ಬಂದಿ ಸಹಾಯದಿಂದ ಆ ಗಿಡಗಳನ್ನು ಕಿತ್ತಿದೆವು ಅಂದರೆ ಸರಿಯಲ್ಲ. ತೂಕ ಮಾಡುವ ಕಾಲಕ್ಕೆ ಆ ಗಿಡದ ಬೇರು, ಕಾಂಡ, ಎಲೆ, ಬೀಜ ಪ್ರತ್ಯೇಕವಾಗಿ ಮಾಡಿಲ್ಲ. ವೈಯಕ್ತಿಕವಾಗಿ ನಾನು ಅವುಗಳನ್ನು ಪ್ರತ್ಯೇಕ ಮಾಡಲು ನಿರ್ದೇಶಿಸಿಲ್ಲ. ಸಾಮಾನ್ಯವಾಗಿ ನಾವು ಎರಡು ಪ್ರತ್ಯೇಕ ಸಾಕ್ಷಿದಾರರನ್ನು ಬರ ಮಾಡಿಕೊಳ್ಳುತ್ತೇವೆ ಅಂದರೆ ನಿಜ. ಆ ಸಮಯದಲ್ಲಿ ಸುಮಾರು 10 ಜನ ಗ್ರಾಮಸ್ಥರು ಇದ್ದರು. Sun Rise ಆದ ನಂತರ Sun Set ಆಗುವ ಅವಧಿಯಲ್ಲಿ ನ್ಯಾಯಾಲಯದಿಂದ ಶೋಧನಾ ವಾರೆಂಟ್ ನ್ನು ಪಡೆದುಕೊಳ್ಳಬೇಕು ಅಂತ ಸಿಬ್ಬಂದಿಗೆ ಹೇಳಿದ್ದೆ. ಆ ಗಿಡಗಳನ್ನು ಯಾರು ತೂಕ ಮಾಡಿದರು ಅಂತ ಅವರ ಹೆಸರು ನಿಖರವಾಗಿ ಹೇಳಲು ಬರುವುದಿಲ್ಲ. ಮಹಜರ ಸಮಯದಲ್ಲಿ ಪೋಟೋವನ್ನು ವಿರುಪಾಕ್ಷಪ್ಪ ಎಂಬುವವರು ತೆಗೆದರು. ವಿರುಪಾಕ್ಷರು ಆ ಸಮಯದಲ್ಲಿ ಚಿತ್ರೀಕರಿಸಿರುವುದಿಲ್ಲ ಅಂದರೆ ಸರಿಯಲ್ಲ. ಈ ಪ್ರಕರಣದ ತನಿಖೆಯಲ್ಲಿ ವಿರುಪಾಕ್ಷ ಎಂಬುವವರು ಇರಲಿಲ್ಲ ಅಂದರೆ ಸರಿಯಲ್ಲ. ಆರೋಪಿಯ ವಿರುದ್ಧ ಸುಳ್ಳು ಸಾಕ್ಷಿ ಕೊಡುತ್ತಿದ್ದೇನೆ ಅಂದರೆ ಸರಿಯಲ್ಲ. ಅಂಕಿ ಸಂಖ್ಯೆಗೋಸ್ಕರ ಈ ಪ್ರಕರಣವನ್ನು ದಾಖಲಿಸಲಾಗಿದೆ ಅಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ, ಹೇಳಿ, ಕೇಳಿ, ಸರಿ ಇದೆ.

Sd/-
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.